**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.343/2019**

**(ಚಾ.ಸಾ.24/ಪ್ರಾ.ಸಾ.15)**

ತಾಃ 19.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಲಿಂಗರಾಜು ಮುಳಗುಂದ |
| ತಂದೆಯ ಹೆಸರು | ಲೇಟ್ ಬಸಪ್ಪ |
| ವಯಸ್ಸು | 42 ವರ್ಷ |
| ಉದ್ಯೋಗ | ಮುಖ್ಯ ಪೇದೆ, ಬಿಡದಿ ಪಿಎಸ್ |
| ವಾಸ ಸ್ಥಳ | ಬಿಡದಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2015 ರಿಂದ ಆಗಸ್ಟ್ 2019 ರವರೆಗೆ ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ02.09.2018 ರಂದು ನಮ್ಮ ತನಿಖಾಧಿಕಾರಿಗಳು ನನ್ನನ್ನು, ಚಾಸಾ.23, 25 ಮತ್ತು 26 ರವರನ್ನು ಆರೋಪಿಗಳ ಪತ್ತೆಗಾಗಿ ಚಾಸಾ.30 ರವರ ಜೊತೆಯಲ್ಲಿ ಹೋಗುವಂತೆ ನೇಮಿಸಿದ್ದರು. ಅದರಂತೆ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ 1 ರಿಂದ 4 ನೇ ಆರೋಪಿಗಳನ್ನು ಗಂಗಸಂದ್ರದಲ್ಲಿ ಪತ್ತೆ ಮಾಡಿ ಅವರನ್ನು ಕರೆತಂದು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇವೆ. ದಿಃ04.09.2018 ರಂದು ಬೆಳಿಗ್ಗೆ 5.00 ಗಂಟೆ ಸಮಯದಲ್ಲಿ 6 ರಿಂದ 11 ನೇ

ಆರೋಪಿಗಳನ್ನು ಒಂದು ಒಮಿನಿ ವ್ಯಾನ್ ಸಂಖ್ಯೆ ಕೆಎ-05/ಎಮ್ ಎಕ್ಸ್-3995 ನಲ್ಲಿ ಜೆ.ಪಿ.ನಗರದ ಬಳಿ ಹೋಗುತ್ತಿದ್ದಾಗ ಪತ್ತೆ ಮಾಡಿ ಅವರನ್ನು ಹಿಡಿದುಕೊಂಡು ವಾಹನದ ಸಮೇತ ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇವೆ. ಸದರಿ ಆರೋಪಿಗಳು ನ್ಯಾಯಾಲಯದ ಮುಂದೆ ಇದ್ದಾರೆ. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ. ಕಾರಿನ ಛಾಯಾಚಿತ್ರಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿ.ಪಿ.20 ಮತ್ತು 21 ಎಂದು ಗುರುತಿಸಲಾಯಿತು. ಕಾರ್ ಅನ್ನು ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ್ದರಿಂದ ಕಾರ್ ಅನ್ನು ಜಪ್ತಿಪಡಿಸಿದ್ದೇವೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಕೆ ಎಸ್ ಆರ್ ವಕೀಲರಿಂದಃ</u>

2. ನಮ್ಮನ್ನು ಚಾಸಾ.30 ರವರ ಜೊತೆ ಆರೋಪಿಗಳ ಪತ್ತೆಗಾಗಿ ನೇಮಿಸಿದ ಬಗ್ಗೆ ಲಿಖಿತವಾಗಿ ದಾಖಲೆ ನೀಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಆರೋಪಿಗಳನ್ನು ಹಿಡಿದುಕೊಂಡಿಲ್ಲ ಮತ್ತು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಆರೋಪಿಗಳನ್ನು ಠಾಣೆಗೆ ಬರುವಂತೆ ಕರೆಮಾಡಿ ಕರೆಸಿ ದಸ್ತಗಿರಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.20 ಮತ್ತು 21 ರಲ್ಲಿ ಇರುವ ವ್ಯಾನ್ ಅನ್ನು ಕೃತ್ಯಕ್ಕಾಗಿ ಉಪಯೋಗಿಸಿದ್ದಾರೆ ಎಂದು ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮುಂದೆ ಕೃತ್ಯಕ್ಕೆ ಉಪಯೋಗಿಸಿದ ಬಗ್ಗೆ ಹೇಳಿಲ್ಲ ಎಂದರೆ ಸರಿ. ಆದರೆ ತನಿಖಾಧಿಕಾರಿಯ ಮುಂದೆ ಹೇಳಿದ್ದಾರೆ. ಆರೋಪಿಗಳು ತನಿಖಾಧಿಕಾರಿಯ ಮುಂದೆ ಸಹ ಈ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಮತ್ತು ನಮ್ಮ ತನಿಖಾಧಿಕಾರಿ ಆರೋಪಿಗಳನ್ನು ದಸ್ತಗಿರಿ

ಮಾಡಿ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.